ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ ಚನ್ನಗಿರಿ .

ಸಿಸಿ ನಂ. **343/2021**

ಹೆಸರುಃ ರುದ್ರಸ್ವಾಮಿ ಚಾಸಾಃ 9

ತಂದೆಃ ಚನ್ನಬಸಯ್ಯ ಫ್ರಾಸಾ: 10

ವಯಸ್ಸುಃ 36

ಉದ್ಯೋಗಃ ಪಿಸಿ

ವಾಸ ಸ್ಥಳಃ ಸಂತೆಬೆನ್ನೂರು

ಸಾಕ್ಷಿಗೆ ದಿನಾಂಕಃ 20.05.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ದಂ ಪ್ರ ಸಂ ಕಲಂ 299 ರಡಿಯಲ್ಲಿ ಸಾಕ್ಷಿ ವಿಚಾರಣೆ:–**

ಮುಖ್ಯ ವಿಚಾರಣೆ ಮಾನ್ಯ ಸಸಅ ರವರಿಂದಃ

2009 ರಿಂದ 2015 ರವರೆಗೆ ನಾನು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪಿ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26.01.2012 ರಂದು ನಾನು ಠಾಣೆಯಲಿದ್ದಾಗ, ಠಾಣಾಧಿಕಾರಿಗಳು ಹೊನ್ನಾಳಿ ಪೊಲೀಸ್ ಠಾಣಾ ಗುನ್ನೆ ಸಂ.199/2011 ರಲ್ಲಿ ವಶಕ್ಕೆ ಪಡೆದ ಮು. ಮಾಲದ ಬೈಕ್ ನ್ನು ಕೃತ್ಯ ಸ್ಥಳದ ಆದಾರದ ಮೇಲೆ ಬಸವ ಪಟ್ಟಣ ಪೊಲೀಸ್ ಠಾಣೆಗೆ ಕಡತಗಳೊಂದಿಗೆ ವಶಕ್ಕೆ ನೀಡುವಂತೆ ಆದೇಶಿಸಿದ್ದರು ಅದರಂತೆ ಪ್ರಕರಣದಲ್ಲಿನ ವಾಹನ ಸಂ ಕೆಎ 17 ಆರ್ 9555 ಹಿರೋ ಹೋಂಡಾ ಪ್ಯಾಷನ್ ಪ್ರೊ ಬೈಕ್ ಮತ್ತು ದಾಖಲಾತಿಗಳನ್ನು ಬಸವಪಟ್ಟಣ ಪೊಲೀಸ್ ಠಾಣೆಗೆ ಹಾಜರುಪಡಿಸಿರುತ್ತೇನೆ. ಆ ಕಾಲಕ್ಕೆ ಮಹಜರ್ ಜರುಗಿಸಲಾಗಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಮಹಜರ್ ನಲ್ಲಿನ ಸಾಕ್ಷಿ ಸಹಿಯನ್ನು ನಿಪಿ 6 ಸಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಚಾಸಾ 7 ಮತ್ತು 8 ರವರು ಪಂಚರಾಗಿ ಹಾಜರಿದ್ದರು. ಆಗ ಸಮಯ 5.00 ರಿಂದ 5.45 ಗಂಟೆಯಾಗಿತ್ತು.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**